# ಕ್ರಿಕೆಟ್ ಜೂಜಾಟ ಆಗಬಾರದು

ಕ್ರಿಕೆಟ್ ಸೆಳೆತ ಬೆರಗುಗೊಳಿಸುವಂತಹುದು. ವಿದ್ಯೆ, ವಯಸ್ಸು, ಹಣ, ಅಂತಸ್ತುಗಳ ಭೇದ ಇಲ್ಲದೆ ಎಲ್ಲರನ್ನೂ ಮೋಡಿ ಮಾಡಿರುವ ಆಟ. ಭಾರತದಲ್ಲಿ ಈ ಆಟದ ಜನಪ್ರಿಯತೆಗೆ ಸಾಟಿಯಾಗುವ ಮತ್ತೊಂದು ಕ್ರೀಡೆ ಈ ಕ್ಷಣಕ್ಕೆ ಇಲ್ಲ. ಅಂತೆಯೇ ಇದಕ್ಕೆ ಅಂಟಿದಷ್ಟು 'ಕೊಳೆ' ಬೇರೆ ಯಾವ ಆಟಕ್ಕೂ ಅಂಟಿದ ನಿದರ್ಶನಗಳಿಲ್ಲ. ಈ ನೆಲೆಯಲ್ಲೂ ಕ್ರಿಕೆಟ್‌ಗೆ ಕ್ರಿಕೆಟ್ಟೇ ಸಾಟಿ!

ಕ್ರಿಕೆಟ್ ಒಂದು ಕಾಲಕ್ಕೆ 'ಸಭ್ಯರ ಆಟ' ಎಂದೇ ಹೆಸರಾಗಿತ್ತು. ಇದರ ಕಲಾತ್ಮಕತೆಗೆ ಮನಸೋತ ಅಭಿಮಾನಿಗಳಿಗೆ ಲೆಕ್ಕವಿಲ್ಲ. ಕೆಲಸ–ಕಾರ್ಯಗಳನ್ನು ಬದಿಗೆ ಸರಿಸಿ, ತಾಳ್ಮೆಯಿಂದ ಐದು ದಿನ ಪಂದ್ಯ ನೋಡುವವರಿದ್ದರು. ಖುದ್ದು ನೋಡಲಾಗದವರು ವೀಕ್ಷಕ ವಿವರಣೆ ಕೇಳುವ ಮೂಲಕ ಆಟದ ಕ್ಷಣ ಕ್ಷಣದ ಸ್ವಾದ ಸವಿಯುತ್ತಿದ್ದರು. ಆಟಗಾರರಿಗೆ ಒಂದು ಘನತೆ ಇತ್ತು. ಆದರೆ ಹಿಂದೆ ಹೊಂದಿದ್ದ ಆ ಖ್ಯಾತಿ ಈಗ ಉಳಿದಿಲ್ಲ. ಆ ಜಾಗವನ್ನು 'ಕಳ್ಳಾಟ'ದ ಕುಖ್ಯಾತಿ ಆಕ್ರಮಿಸಿದೆ. ಸಭ್ಯರ ಆಟ, ಎಷ್ಟರಮಟ್ಟಿಗೆ ಶುದ್ಧ ಕ್ರೀಡೆಯಾಗಿ ಉಳಿದಿದೆ ಎಂಬ ಗಂಭೀರ ಪ್ರಶ್ನೆ ಎದುರಾಗಿದೆ.

ಕಾಲ ಬದಲಾದ ಹಾಗೆ ಕ್ರಿಕೆಟ್ ಸ್ವರೂಪ ಬದಲಾಯಿತು. ಐದು ದಿನ ಅವಧಿಯ ಟೆಸ್ಟ್ ಪಂದ್ಯಗಳನ್ನು ಏಕದಿನ ಪಂದ್ಯಗಳು ಮೂಲೆಗೆ ಒತ್ತರಿಸಿದವು. ಅದು ಮತ್ತೂ ಚುಟುಕಾಗಿ 20–ಟ್ವೆಂಟಿ ರೂಪ ತಾಳಿದೆ. ಇಷ್ಟೇ ಆಗಿದ್ದರೆ ಪರವಾಗಿಲ್ಲ. ಆಟದ ಜತೆ ಹಣ, ಗ್ಲ್ಯಾಮರ್ ಸೇರಿತು– ಆಟಕ್ಕಿಂತಲೂ ಅವೇ ಹೆಚ್ಚು ಪ್ರಾಧಾನ್ಯ ಪಡೆಯುವ ಮಟ್ಟಿಗೆ. ಥಳಕು ಹೆಚ್ಚಾಗುತ್ತಲೇ ಆಟದ ಸೊಬಗು ಸೊರಗಿತು. ನೈಪುಣ್ಯ ನೇಪಥ್ಯಕ್ಕೆ ಸರಿಯಿತು. ತಾಂತ್ರಿಕ ಅಂಶಗಳು ಗೌಣವಾದವು. ಹಣ ಬಾಚಿಕೊಳ್ಳುವುದೇ ಮುಖ್ಯವಾಯಿತು.

ಇದರ ಪರಿಣಾಮವಾಗಿ 'ಕಳ್ಳಾಟ'ದ ಕುಣಿತ ಎಗ್ಗು–ಸಿಗ್ಗುಗಳನ್ನು ಮೀರಿ ಮೈದಾನಕ್ಕೂ ನುಗ್ಗಿತು. ಬೆಟ್ಟಿಂಗ್ ಮಾಫಿಯಾ ದೂರದಲ್ಲಿ ಎಲ್ಲೋ ಕುಳಿತು ಆಟದ ಗತಿ ನಿರ್ದೇಶಿಸುವ ಮಟ್ಟಿಗೆ ತನ್ನ ಕಬಂಧ ಬಾಹುಗಳನ್ನು ಚಾಚಿತು. ಮ್ಯಾಚ್ ಫಿಕ್ಸಿಂಗ್, ಸ್ಪಾಟ್ ಫಿಕ್ಸಿಂಗ್ ಅವಾಂತರಗಳು ಬಯಲಾದವು. ಕೆಲವು ಪ್ರಮುಖ ಆಟಗಾರರೇ ಇದರಲ್ಲಿ ಭಾಗಿಯಾಗಿದ್ದರೆ ಎನ್ನುವಂಥ ಸುದ್ದಿಗಳು ಸ್ಫೋಟಗೊಂಡಾಗ ಕ್ರಿಕೆಟ್ ಅನ್ನು ಒಂದು ಧರ್ಮವಾಗಿ ಸ್ವೀಕರಿಸಿರುವ ಅಭಿಮಾನಿಗಳಿಗೆ ಆಘಾತವಾಯಿತು. ಬೆಟ್ಟಿಂಗ್ ದುಷ್ಟಕೂಟವನ್ನು ಗಮನದಲ್ಲಿ ಇರಿಸಿಕೊಂಡೇ ಐಪಿಎಲ್ ಜನ್ಮತಳೆಯಿತೇನೊ ಎಂದು ಅನುಮಾನಪಡುವ ಮಟ್ಟಿಗೆ ಕ್ರಿಕೆಟ್‌ಗೆ ಕಳಂಕ ಅಂಟಿದೆ.

ಜಗತ್ತಿನ ಅತ್ಯಂತ ಶ್ರೀಮಂತ ಕ್ರೀಡಾಮಂಡಳಿಗಳಲ್ಲಿ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯೂ (ಬಿಸಿಸಿಐ) ಒಂದು. ಇದರ ವಹಿವಾಟು ಸಾವಿರಾರು ಕೋಟಿ. ಅಪಾರ ಪ್ರಮಾಣದ ಹಣ ಹಾಗೂ ತಾರಾ ವರ್ಚಸ್ಸುಳ್ಳ ಆಟ ಮತ್ತು ಆಟಗಾರರನ್ನು ನಿಯಂತ್ರಿಸಬಹುದಾದ ಇಂಥ ಮಂಡಳಿಯ ಚುಕ್ಕಾಣಿ ಹಿಡಿಯುವುದೆಂದರೆ ಅದಕ್ಕಿಂತ ಪ್ರತಿಷ್ಠಿತವಾದುದು ಇನ್ನೇನಿರಲು ಸಾಧ್ಯ? ರಾಜಕೀಯ ರಂಗದ ಪ್ರಭಾವಿಗಳು ಹಾಗೂ ಉದ್ಯಮ ವಲಯದ ಧನಿಕರು ಬಿಸಿಸಿಐ ಮೇಲೆ ಹಿಡಿತ ಸಾಧಿಸಲು ಪೈಪೋಟಿಗಿಳಿದರು.

ಹೀಗೆ ಪೈಪೋಟಿಗಿಳಿದು ಬಿಸಿಸಿಐ ಚುಕ್ಕಾಣಿ ಹಿಡಿದ ಎನ್.ಶ್ರೀನಿವಾಸನ್ ಅವರ ಆಡಳಿತಾವಧಿಯಲ್ಲೇ ಐಪಿಎಲ್ ಆರನೇ ಆವೃತ್ತಿಯ ಸ್ಪಾಟ್ ಫಿಕ್ಸಿಂಗ್ ಹಾಗೂ ಬೆಟ್ಟಿಂಗ್ ಹಗರಣ ಬಯಲಾದುದು. ಹಗರಣ ಕಾರಣಕ್ಕೇ ಬಿಸಿಸಿಐ ಅಧ್ಯಕ್ಷ ಸ್ಥಾನದಿಂದ ಅಮಾನತುಗೊಂಡ ಇವರು, ಇಂಡಿಯಾ ಸಿಮೆಂಟ್ಸ್ ಕಂಪೆನಿಯ ಮಾಲೀಕರೂ ಹೌದು. ಈ ಕಂಪೆನಿಯು ಚೆನ್ನೈ ಸೂಪರ್ ಕಿಂಗ್ಸ್ ತಂಡದ ಒಡೆತನವನ್ನೂ ಹೊಂದಿದೆ. ಶ್ರೀನಿವಾಸನ್‌ರ ಅಳಿಯ ಗುರುನಾಥ್ ಮೇಯಪ್ಪನ್ ಅವರು ಹಗರಣದಲ್ಲಿ ಭಾಗಿಯಾಗಿದ್ದಾರೆ ಎನ್ನುವುದಕ್ಕೆ ಪುರಾವೆ ಇದೆಯಂತೆ. ಈ ಹಗರಣ ಕುರಿತ ತನಿಖಾ ವರದಿ ಸುಪ್ರೀಂಕೋರ್ಟ್ ಕೈಸೇರಿದೆ. ವಿಚಾರಣೆಯೂ ಮುಂದುವರಿದಿದೆ. ಸೂಪರ್ ಕಿಂಗ್ಸ್ ತಂಡದ ನಾಯಕ ಮಹೇಂದ್ರ ಸಿಂಗ್ ಧೋನಿ ಅವರು ಭಾರತ ತಂಡದ ನಾಯಕರೂ ಹೌದು. ಹಿತಾಸಕ್ತಿ ಸಂಘರ್ಷಗಳು ಎಲ್ಲ ಹಂತಗಳಲ್ಲಿಯೂ ಹೆಜ್ಜೆ ಹೆಜ್ಜೆಗೂ ಪರಸ್ಪರ ಡಿಕ್ಕಿ ಹೊಡೆಯುತ್ತಿವೆ. ಈ ನೆಲದ ಅತ್ಯಂತ ಜನಪ್ರಿಯ ಕ್ರೀಡೆಯಾದ ಕ್ರಿಕೆಟ್ ಬಗೆಗೆ ಯುವಜನರ ವಿಶ್ವಾಸ ಪುನಃ ಕುದುರಿಸಲು ಮತ್ತು ಅದಕ್ಕೆ ಅಂಟಿರುವ ಮಸಿಯನ್ನು ಸಂಪೂರ್ಣವಾಗಿ ತೊಳೆಯಲು ಕ್ರೀಡಾ ಸಂಸ್ಥೆಗಳು, ಆಟಗಾರರು, ಆಡಳಿತಗಾರರು, ಸರ್ಕಾರ ದೃಢ ನಿಲುವು ತಳೆಯಬೇಕಾಗಿದೆ. ಕಟಿಬದ್ಧವಾಗಿ ಕೆಲಸ ಮಾಡಬೇಕಾಗಿದೆ. ಇಲ್ಲದೇ ಹೋದರೆ ಮುಂದೊಂದು ದಿನ ಕ್ರಿಕೆಟ್ ಬರೀ ಜೂಜಿನ ದಾಳವಾಗಿ ಪರಿವರ್ತನೆಗೊಳ್ಳುವ ಅಪಾಯ ಇದೆ.

■ ಎನ್.ಉದಯಕುಮಾರ್

ಕ್ರಿಕೆಟ್ ಒಂದು ಕಾಲಕ್ಕೆ 'ಸಭ್ಯರ ಆಟ' ಎಂದೇ ಹೆಸರಾಗಿತ್ತು. ಇದರ ಕಲಾತ್ಮಕತೆಗೆ ಮನಸೋತ ಅಭಿಮಾನಿಗಳಿಗೆ ಲೆಕ್ಕವಿಲ್ಲ. ಕೆಲಸ–ಕಾರ್ಯಗಳನ್ನು ಬದಿಗೆ ಸರಿಸಿ, ವೀಕ್ಷಕ ವಿವರಣೆ ಕೇಳುವ ಮೂಲಕ ಆಟದ ಕ್ಷಣ ಕ್ಷಣದ ಸ್ವಾದ ಸವಿಯುತ್ತಿದ್ದರು. ಆದರೆ ಹಿಂದೆ ಹೊಂದಿದ್ದ ಆ ಖ್ಯಾತಿ ಈಗ ಉಳಿದಿಲ್ಲ. ಆ ಜಾಗವನ್ನು 'ಕಳ್ಳಾಟ'ದ ಕುಖ್ಯಾತಿ ಆಕ್ರಮಿಸಿದೆ. ಸಭ್ಯರ ಆಟ, ಎಷ್ಟರಮಟ್ಟಿಗೆ ಶುದ್ಧ ಕ್ರೀಡೆಯಾಗಿ ಉಳಿದಿದೆ ಎಂಬ ಗಂಭೀರ ಪ್ರಶ್ನೆ ಎದುರಾಗಿದೆ.

